Regd No M 1299 Sri ತಾ|| 27—10—51

SATYAVADI = 35th Year.

ಸ್ಥಾಪಕರು- ಅರಮನೆ ಸಿರಸ್ತೆದಾರ್ ಎ೫. ಎ. ಸುಬ್ರಾಯರು | ಬಿಡಿ ಪ್ರತಿ 3 ಪೈ

ಚುನಾವಣಾ ಸಮಿತಿಗೆ ಎಚ್ಚರಿಕೆ

ಮೈಸೂರು ಕಾಂಗ್ರೆಸ್ ಚುನಾವಣಾ ಪಟ್ಟಿ ಬಗೆಗೆ ಬೆಂಗಳೂರು ಕಾರ್ಪೊರೇಷನ್ನಿನ ಜಿಲ್ಲಾ ಸಮಿತಿ ಅನಪೇಕ್ಷಿತ ಸೂಚಿಸಿ ನಿರ್ಣಯ ಮಾಡಿದೆ. ಪುನರ್ಪರಿಶೀಲನೆ ನಡೆಯುದಿದ್ದಲ್ಲಿ ಚುನಾವಣೆ ಸಮಿತಿಯೊಂದಿಗೆ ಅದು ಸಹಕರಿಸುವದಿಲ್ಲವೆಂದಿದೆ.

ಬ್ರಿಟಿಷ್ ಟೋರಿ ಪಕ್ಷದ ನಾಯಕರಾದ ಚರ್ಚಿಲ್ ಡೈಲಿ ಮಿರರ್ ಪತ್ರಿಕೆ ಮೇಲೆ ಮಾನನಷ್ಟಕ್ಕಾಗಿ ಹೋಗಿರುವರು ಚುನಾವಣೆ ಸಂಬಂಧದಲ್ಲಿ ಈ ಪತ್ರಿಕೆ ಲೇಖನ ಪ್ರಕಟಿಸಿರುವದೇ ಈ ಮೊಕದ್ದಮೆ ಕಾರಣ

ಭಾರತಕ್ಕೆ ಬ್ರಹ್ಮ ಪ್ರಧಾನಿ ಥಾಕಿನ್ ಬಂದಿರುವಷ್ಟೆ ಅವರನ್ನು ಹತ್ಯೆ ಲಕ್ಷ್ಯ ಟಕ್ಕಿ ಕಳಿಸಿದೆ ಕೆಂದು ಸಪ್ತ ಪ್ರಧಾನಿ ನೆಹರುಗೆ ಸುಳಿಹೆ ಕೊಡಲಾಗಿದೆಯೆಂಬ ವಾರ್ತೆ ವದಂತಿಸಿನ ವಾರ್ತೆ

ಸಿಕ್ ಪಂಗಡಕ್ಕೆ ಆಗುವ ಅನ್ಯಾಯ ಅಪಕಾರವಾದದಂತೆ ಅದಕ್ಕೋಸ್ಕರ ಕಾಂಗ್ರೆಸ್ ಬೆಂಬಲಕ್ಕೆ ರಚಿತವಾಗಿದ್ದ ಅಕಾಲಿದಳ ರದ್ದು ಮಾಡಲ್ಪಟ್ಟ ವಾರ್ತೆ ಜಲಂಧರದಿಂದ ಬಂದಿದೆ ಇವರೆಲ್ಲ ಮಾಸ್ಟರ್ ತಾರಾಸಿಂಗರ ಅನುಯಾಯಿಗಳಾಗುವರು

ಮಹಾ ಚುನಾವಣೆಯಲ್ಲಿ ಚರ್ಚಿಲ್ಲರ ಪುತ್ರ ಸೋತರು

ಪ್ರಜಾ ಸಂಘದ ಪ್ರಕಟಣೆ

ಮೈಸೂರು ಪ್ರಜಾ ಸಂಘ ಚುನಾವಣೆ ಉಮೇದುವಾರಿಕೆ ಪತ್ರಗಳನ್ನು ತೆಗೆದ ಕೊಳ್ಳಲು, ಪರಿಶೀಲಿಸಲು 3-11-51 ರವರೆಗೆ ಅವಕಾಶ ಮಾಡಿಕೊಡಲಾಗಿದೆ.

ಕೊನೇ ಅಧಿಕಾರ

ಬೊಂಬಾಯಿನಲ್ಲಿ ಮೊನ್ನೆ ಬ್ರಿಟಿಷ್ ಟ್ರೇಡ್ ಯೂನಿಯನ್ ಕಾಂಗ್ರೆಸ್ ನಾಯಕರಾದ ರಾಬರ್ಟ್ಸ್‌ರವರು ಹೊರಡಿಸಿದ ಹೇಳಿಕೆಯಲ್ಲಿ ಈ ಬಾರಿ ಬ್ರಿಟಿಷ್ ಆಯ್ಕೆಯಲ್ಲಿ ಟೋರಿಗಳು ಗೆಲ್ಲಬಹುದು ಆದರೆ ಅವರಿಗೆ ಇದೇ ಕಡೇ ಗೆಲುವು ಎಂದರು.

× ಸೂಯೆಜ್ ಮತ್ತು ಸೂಡಾನನ್ನು ಬ್ರಿಟನ್ ತ್ಯಜಿಸಲೇ ಬೇಕೆಂದು ಈಜಿಪ್ಟ್ ವಿದೇಶ ಸಚಿವರು ಕೈರೋದಲ್ಲಿ ತಿಳಿಸಿರುವರು

× ಭಾರತದಾದ್ಯಂತ ಬೆಂಗಳೂರಿನ 6 ಪ್ರದೇಶಗಳಲ್ಲಿ ಬೆಳಿಗ್ಗೆ 8 ರಿಂದ ಮಧ್ಯಾಹ್ನ 12 ರವರೆಗೆ ಮಾದರಿ ಚುನಾವಣೆ ಏರ್ಪಾಟಾಗಿದೆ

× ಬ್ರಿಟನ್ನಿನ ಲೇಬರ್ ವಿಂಡಲದಲ್ಲಿದ್ದ ಸದಸ್ಯರೆಲ್ಲರೂ ಪಾರ್ಲಿಮೆಂಟಿಗೆ ಆರಿಸಿಬಂದಿದ್ದಾರೆ

× ಹಿಂದೀ ಮಾಧ್ಯಮ ವಿಶ್ವವಿದ್ಯಾನಿಲಯಗಳಲ್ಲಿ ಬರಬೇಕೆಂದು ಬೊಂಬಾಯಿ ಗವರ್ನರರ ಹೇಳಿಕೆ

ಶ್ರೀ ಸಿದ್ಧಲಿಂಗಸ್ವಾಮಿಗಳ ದೇಹಸ್ಥಿತಿ ಸುಧಾರಿಸುತ್ತಿದೆ

ಶ್ರೀ ನಾಗಲಿಂಗಸ್ವಾಮಿಯವರ ಶ್ರೀ ಮಠದ ಜಗದ್ಗುರುಗಳವರಾದ ತಿಪ್ಪಸಿದ್ಧಾಂತಿ ಶ್ರೀ ಶ್ರೀ ಸಿದ್ಧಲಿಂಗಸ್ವಾಮಿಗಳವರು ಈಗ ಒಂದು ವಾರದಿಂದ ದೇಹಾಲಸ್ಯರಾಗಿದ್ದರು. ಪರಶಿವನ ಕೃಪೆಯಿಂದ ಶ್ರೀ ಶ್ರೀಗಳವರ ದೇಹಾರೋಗ್ಯ ಇದೀಗ ಸುಧಾರಿಸುತ್ತಿದೆ. ಶ್ರೀ ಶ್ರೀಗಳವರು ಈ ದಿವಸ ಬೆಳಿಗ್ಗೆ ಹರ್ಷಚಿತ್ತರಾಗಿದ್ದರು. ಸ್ವಾಮಿಗಳವರ ಸಂದರ್ಶನಕ್ಕಾಗಿ ಅವರ ಶಿಷ್ಯರು ಮತ್ತು ಭಕ್ತರು ಆಗಮಿಸುತ್ತಿದ್ದರು. ಅವರೊಡನೆ ಸ್ವಾಮಿಗಳವರು ಸಂಭಾಷಿಸುತ್ತಿದ್ದರು ದಯಾಮಯ ಪರಶಿವನ ಕೃಪೆಯಿಂದ ಶ್ರೀ ಶ್ರೀಗಳವರು ಬೇಗನೇ ಸಂಪೂರ್ಣ ಆರೋಗ್ಯ ಪಡೆಯಲೆಂದು ಪ್ರಾರ್ಥನೆ.

ಬ್ರಿಟನ್‌ನಲ್ಲಿ ಪುನಹ ಮಹಾ ಚುನಾವಣೆ ಜರಗುವುದು ?

ಬ್ರಿಟನ್ನಿನ ಪಾರ್ಲಿಮೆಂಟಿನಲ್ಲಿ ಕನ್ಸರ್ವೆಟೀವ್ ಬಹುಮತ ತೀರ ಅಲ್ಪವಿರುವದರಿಂದ ಮತದಾರರಿಗೆ ಸ್ಥಿರ ಹಾಗೂ ಅನುಕೂಲ ಬಹುಮತವನ್ನು ಗಳಿಸಿಕೊಡಬೇಕೆಂದು ಚರ್ಚಿಲ್ಲರು ಪ್ರಾರ್ಥಿಸಬೇಕಾಗಬಹುದೆಂದು ನವದೆಹಲಿಯಲ್ಲಿ ಬ್ರಿಟನ್ನಿನ ಚುನಾವಣೆ ಫಲಿತಾಂಶದ ಬಗೆಗೆ ಪ್ರತಿಕ್ರಿಯೆ ಎದ್ದಿದೆ

ಅಟ್ಲಿ ರಾಜೀನಾಮೆ ಅರ್ಪಿಸಿದರು

ಲಂಡನ್, ಅ 26 — ಬ್ರಿಟನ್ನಿನಲ್ಲಿ ಮಹಾ ಚುನಾವಣೆ ಫಲಿತಾಂಶವಾಗಿ ಲೇಬರ್ ಪಕ್ಷ ಪರಾಜಿತವಾದ್ದರಿಂದ, ಬ್ರಿಟನ್ ದೊರೆಗಳಿಗೆ ತಮ್ಮ ರಾಜೀನಾಮೆಯನ್ನು ಅರ್ಪಿಸಲು ಕ್ಲೆಮೆಂಟ್ ಅಟ್ಲಿ ನಿಶ್ಶಬ್ದ ಗಂಟನ್ನು ಹಾದು ಬಕಿಂಗ್ಹಾಂ ಅರಮನೆಯನ್ನು ತಲುಪಿದರು. ಅನಂತರ, ತಕ್ಷಣ ಚರ್ಚಿಲ್‌ರಿಗೆ ಅರಮನೆಯಿಂದ ಕರೆ ಬಂದಿತು. ಈ ವರ್ತನ್ನ, ಸಂತೋಷದಿಂದ ಕೂಡಿದ್ದ ಸಹಸ್ರಾರು ಮಂದಿ ಕನ್ಸರ್ವೆಟೀವ್ ಪಕ್ಷದ ಕೇಂದ್ರ ಕಚೇರಿ ಮುಂದೆ ಚರ್ಚಿಲರಿಗೆ ಜೈಕಾರ ಮಾಡಿದರು ಈಗ ಕಠಿಣ ಕಾಲ ಬಹಳ ಇವೆ. ಆದರೆ ಅವುಗಳ ಬಗ್ಗೆ ಬಗೆ ಹರಿಸಲು ಅನುಮಾನವಿಲ್ಲ ಎಂದು ಚರ್ಚಿಲ್ಲರು ತಿಳಿಸಿದರು.

ಚರ್ಚಿಲ್ಲರು ಸರ್ಕಾರ ವಹಿಸಿಕೊಳ್ಳುವರು

ಬ್ರಿಟನ್ನಿನ ಎಲ್ಲ ರಾಜಕೀಯ ಪಕ್ಷಗಳಿಗಿಂತಲೂ ಸುಮಾರು 25 ಮತಗಳನ್ನು ಗಳಿಸಿದ ಕನ್ಸರ್ವೆಟೀವ್ ಪಕ್ಷದ ನಾಯಕರಾದ ಚರ್ಚಿಲ್‌ರವರನ್ನು ನಿನ್ನೆ ರಾತ್ರಿ ಬ್ರಿಟಿಷ್ ದೊರೆ ಆನೇ ಜಾರ್ಜರು ಬಕಿಂಗ್ಹಾಂ ಅರಮನೆಗೆ ಕರೆಸಿ ಅಡಳಿತ ವಹಿಸಿಕೊಳ್ಳಬೇಕೆಂದು ತಿಳಿಸಿದರು. ಸರ್ಕಾರವನ್ನು ರಚಿಸಲು ಚರ್ಚಿಲರು ಅಂಗೀಕರಿಸಿದರೆಂದು ಲಂಡನ್ ವಾರ್ತೆ ತಿಳಿಸುತ್ತದೆ.

ತೇವಣಿ ಹೋಯಿತು

ಬ್ರಿಟನ್ನಿನ ಮಹಾ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಹತ್ತು ಮಂದಿ ಕಮ್ಯುನಿಸ್ಟರು ತಮ್ಮ ತೇವಣಾತಿ ನೂರೈವತ್ತು ಪೌಂಡ ಗಳನ್ನು ಕಳೆದುಕೊಂಡರು.

ಅಧಿಕೃತ ಅಭಿಪ್ರಾಯ ಹೊರಟಿಲ್ಲ

ಬ್ರಿಟನ್ನಿನ ಮಹಾ ಚುನಾವಣಾ ಫಲಿತಾಂಶ ಕುರಿತು ನವದೆಹಲಿಯಿಂದ ಅಧಿಕೃತ ಅಭಿಪ್ರಾಯ ಹೊರಟಿಲ್ಲ.

ಲೇಬರ್ ಗುಂಪಿನ ಸೋಲಿಗೆ ಕಾರಣವೇನು ?

ಅಧಿಕವಾಗಿ ಲಿಬರಲ್‌ಗಳು ಕನ್ಸರ್ವೆಟೀವ್‌ಗಳಾದುದರಿಂದ ನಮಗೆ ಪರಾಜಯವಾಯಿತೆಂದು ಬ್ರಿಟನ್ನಿನ ಲೇಬರ್ ಪಕ್ಷದ ನಾಯಕ ಕ್ಲೆಮೆಂಟ್ ಅಟ್ಲಿ ನಿನ್ನೆ ರಾತ್ರಿ ವಾಹನ ಸಾರಿಗೆ ಕಾರ್ಮಿಕರ ಸಭೆಯಲ್ಲಿ ತಿಳಿಸಿದರೆಂದು ಲಂಡನ್ ವಾರ್ತೆ.

ಜವಾಬ್ದಾರಿ ಇದ್ದೇ ಇದೆ

ನಿನ್ನೆ ದಿಹಲಿಯಲ್ಲಿ ನಿವೃತ್ತರಾಗಿ ಹೋಗುವ ರಾಜಾಜಿ ಗೌರವಾರ್ಥ ನಾಗರೀಕರು ವಿಶೇಷ ಸಮಾರಂಭ ಏರ್ಪಡಿಸಿದ್ದರು. ಪಂ|| ನೆಹರು ಭಾಷಣ ಮಾಡುತ್ತಾ ಅವರು ನಿವೃತ್ತರಾದರೂ ಅವರ ಮೇಲಿನ ಜವಾಬ್ದಾರಿ ತಪ್ಪದೆಂದರು.

ಕಮ್ಯುನಿಸ್ಟರ ಸೂಚನೆಗೆ ತಿರಸ್ಕಾರ

ಕೊರಿಯ ರಣಭೂಮಿಯಿಂದ ವಿಶ್ವಸಂಸ್ಥೆ ಸೇನೆ ಹದಿನೈದು ಮೈಲುಗಳ ಹಿಂದೆ ಸರಿಯಬೇಕೆಂದು ಕಮ್ಯುನಿಸ್ಟ್ ಸೂಚನೆಯನ್ನು ವಿಶ್ವಸಂಸ್ಥೆ ಸಂಧಾನ ನಿಯೋಗ ತಿರಸ್ಕರಿಸಿತೆಂದು ಟೋಕಿಯೋ ವಾರ್ತೆ.

× ನರಕ ಚತುರ್ದಶಿ ಪ್ರಯುಕ್ತ ಸೋಮವಾರ ಸತ್ಯವಾದಿಗೆ ರಜ

Edited, Printed and Published by Dharma Prachara Nirata M. S. Krishna Rao. at the Satyavadi Press Chamrajpuram Mysore

ಸಸ್ಯಕ್ಕೆ ಯುವತಿಯರ ಆಹುತಿ

ಮನುಷ್ಯನನ್ನು ಮನುಷ್ಯ ತಿನ್ನುವ ನೆಂದರೆ ನೀವು ನಂಬಲಾರಿರಿ. ಆ ಮಾತಿಂಲಿ ಮನುಷ್ಯನನ್ನು ತಿನ್ನುವ ಸಸ್ಯಗಳೂ ಉಂಟು ಬಹುಕಾಲ ದಿಂದಲೂ ನರಭಕ್ಷಕ ಮಂಗಳ ವಿಷಯ ವಾಗಿ ವಿಚಿತ್ರವಾದ ಕತೆಗಳು ಜನರಲ್ಲಿ ಪ್ರಚಲಿತವಾಗಿವೆ.

ಈ ಬಗ್ಗೆ ಒಂದು ಕತೆ ಕೇಳಿ ಹಿಂದೆ ಒಂದು ತಾಳೆ ಮರದ ರೀತಿಯ ಮರ ವಿತ್ತಂತೆ ಆ ಮರದಲ್ಲಿ ಹಂದೆರಡಡಿ ಅಗಲವಾಗಿ ಮೂರು ನಾಲ್ಕು ಅಡಿ ಉದ್ದವಾದ ಎಲೆಗಳಿರುತ್ತವೆಯಂತೆ ಎಲೆಯ ಮೇಲ್ಭಾಗದಲ್ಲೆಲ್ಲಾ ಸ್ಪರ್ಶ ಗ್ರಾಹಿ ಒಳ್ಳೆಗಳು ಬೆಳೆದಿರುತ್ತವೆ ಅವು ಗಳ ಮೇಲೆಲ್ಲ ಮುಳ್ಳು ಬೆಳೆದಿರುತ್ತವೆ ಆಫ್ರಿಕಾ ನಿವಾಸಿಗಳು ವಕ್ಕಳು ಮತ್ತು ಯುವತಿಯರನ್ನು ಈ ಮರಗಳಿಗೆ ಆಹುತಿಯಾಗಿ ಅರ್ಪಿಸುತ್ತಿದ್ದರು. ಎಲೆಯ ಮೇಲೆ ಆಹುತಿಯನ್ನು ಮಲಗಿಸಿದಾಗ ಸ್ಪರ್ಶಗ್ರಾಹಿ ಒಳ್ಳೆಗಳು ಅದನ್ನು ಮಿ ತಿ ಹಿಡಿದುಕೊಳ್ಳುತ್ತವೆ. ಅವುಗಳ ಲ್ಲಿರುವ ಮುಳ್ಳುಗಳು ಶರೀರವನ್ನೆಲ್ಲಾ ಚ ಚ್ಚುತ್ತವೆ. ಹೀಗೆ ಚ.ಚ್ಚಿದಾಗ ಬ ರುವ ರಕ್ತವನ್ನು ಬಸಿದುಕೊಂಡು ದೇವ ರ ಪ್ರಸಾದವೆಂದು ಎಲ್ಲರೂ ಹಂಚಿ ಕೊಂಡು ಕುಡಿಯುತ್ತಿದ್ದರಂತೆ. [ಶು]

ರಿವರ್ ಚಿತ್ರ

ಅಮೇರಿಕೆಯಲ್ಲಿ ಭಾರತದ ರಾಯ ಭಾರಿಗಳಾಗಿರುವ ಶ್ರೀಮತಿ ವಿಜಯ ಲಕ್ಷ್ಮಿ ಪಂಡಿತರವರು ಪ್ರಮುಖ ರಾಯ ಭಾರಿಗಳನ್ನು ಇತರರನ್ನು 'ರಿವರ್' ಎಂಬ ಚಲನಚಿತ್ರ ನೋಡಲು ಬರಬೇ ಕೆಂದು ಆಹ್ವಾನಿಸಿದ್ದಾರೆ ರಿವರ್ ಎಂ ಬ ಸಂಪೂರ್ಣ ವರ್ಣರಂಜಿತ ಚಿತ್ರವನ್ನು ಭಾರತದಲ್ಲಿ ತಯಾರಿಸಲಾಯಿ ಈ ಪ್ರದರ್ಶನ ಇದೇ 30 ನೇ ತಾ|| ನಡೆ ಯುವುದು

ದಿವ್ಯವಾಣಿ

ಯಾವಾಗಲೂ ಮನಸ್ಸು [ಚಿತ್ತವು) ನೆನ್ಮದಿಯಾಗಿಯೂ ನಿರ್ಮಲವಾಗಿಯೂ ಸತ್ಕರ್ಮನಿರತವಾಗಿಯೂ ಇದ್ದು, ಸಂ ತತಿ ಸಂಪತ್ತುಗಳಿಂದ ಕೂಡಿಕೊಂಡಿರು ವುದೇ ಸುಖವೆಂದು ಹೇಳಲ್ಪಡುವುದು !

— ಗೀತೆ

ನಾಗರಿಕ ಜೀವನಕ್ಕೆ ಕೊರಿಯ ನಂ ಬಾಲಕಿಯರಂತೆ ವಿತ್ತಸಂಸ್ಥೆಯವರು ಸಹಾಯ ಮಾಡಿತ್ತಿದ್ದಾರೆ. ಚಿತ್ರದಲ್ಲಿರುವವರು ಪೂರ್ವಾನ ಕಬ' ಸ್ಕೌಟುಗಳು

ಉಡ್‌ಲಾಂಡ್ಸ್ 26–10–51 ರಿಂದ

ಶಿ ಸು

Neki Aur Badi ನೇಕಿ ಔರ್ ಬದಿ

ಮಧುಬಾಲ, ಗೀತಾಬಾಲಿ, ಕಿದಕೆರನಾಥ್, ಕಕ್ಕೂ ಪಾತ್ರವಹಿಸಿರುವ

ಸುಮನೋಹರ ಹಿಂದಿ ಚಿತ್ರ] [ಪ್ರತಿ ದಿನ 3 ಪ್ರದರ್ಶನಗಳು

ಅಪೇರ— ಕೇರ್ತಿಯುತ 5 ನೇ ವಾರ

ಸೆ ವಾ ರ್ ಧಿ ಕಾ ರಿ

ಪಾತ್ರ — ಅಂಜಲಿದೇವಿ, ನಾಗಯ್ಯ, ರಾಮಚಂದ್ರ್, ನಂಬಿಯಾರ್

ಮಹೋನ್ನತ ತಮಿಳು ಚಿತ್ರ ಪ್ರತಿ ದಿನ 3 ಆಟಗಳು

ಬೆಳಗಿನ ಪ್ರದರ್ಶನ 26–10–51 ರಿಂದ .... ಜ ಗಿ ೀ ರ್ ರ್

ರಣಜಿತ್ 26–10–51 ರಿಂದ

ಮನಮೋಹನ ಹಿಂದಿ ಚಿತ್ರ ಪ್ರತಿ ದಿನ 3 ಆಟಗಳು

ನೌಜವಾನ್ Naujavn

ಪಾತ್ರ— ನಳಿನಿ ಜಯವಂತ್, ಪ್ರೇಮನಾಥ್

ಬೆಳಗಿನ ಪ್ರದರ್ಶನ 26–10–51 ರಿಂದ — — ದಿಲ್ ಕಿ ದುನಿಯಾ

ಸ ತ್ಯ ವಾ ದಿ

ದಿನಪತ್ರಿಕೆ ತಿಂಗಳಿಗೆ 6 ಆಣೆಗಳು

ಸತ್ಯವಾದಿ ಸೋಮವಾರ ಸಂಚಿಕೆ

ಶ್ರೀ ದ್ವಾರಕಾ ಜಗದ್ಗುರುಗಳವರ

ಉದಾರಾಶ್ರಯದಲ್ಲಿ ಪ್ರಕಟವಾಗುವ

- ಪ್ರ ಬೋ ಧ -

ಧಾರ್ಮಿಕ ಸಪ್ತಾಹಿಕವನ್ನೊಳಗೊಂಡಿದೆ

ವಾರ್ಷಿಕ ಚಂದಾ

ಅಂಚೆವೆಚ್ಚ ಸಮೇತ 1–14–0

For Quality Printing

L. N. Press

Sivarampet, Mysore

ಶಕ್ತಿಸುಧಾ

— ಉತ್ತಮವಾದ ಟಾನಿಕ್ —

ಗೋ ಸಂ ರ ಕ್ಷ ಣೆ ಮಾ ಡಿ



Protect the Cow